ಇವಳಿಗಾಗಿ ಅಳುವುದರಿಂದ ಯಾವ ಪ್ರಯೋಜನವೂ ಇಲ್ಲ.' ಯಾವುದೋ ದೂರದ ನಾಡಿನಿಂದ ಬಂದ ಮಾಟಗಾರ ಹೀಗೆ ಹೇಳಿದ, 'ಈ ಹುಡುಗಿಯ ಬದುಕಿನ ದಾರದ ಉಂಡೆಯು ಕೊನೆ ತಲುಪಿದೆ. ಬದುಕಿನ ಬಂಧನದಿಂದ ಇವಳು ಬೇಗ ಬಿಡುಗಡೆ ಪಡೆದು ತನ್ನ ಮನೆಗೆ ತೆರಳಬೇಕು ಎನ್ನುವುದು ದೇವರ ಇಚ್ಛೆ.'

ತನ್ನ ಮರಣಶಯ್ಯೆಯ ಮೇಲೆ ನರಳುತ್ತ, ಚೀರುತ್ತ ಮಲಗಿದ್ದ ಅವಳು ಆಗಾಗ, ತನ್ನ ತಲೆಯ ಕಡೆ ತೋರಿಸುತ್ತಿದ್ದಳು. ಆಗ ಅವಳಿಗೆ ಸುಡುವ ಜ್ವರ ಮತ್ತು ಸೀಳಿಹೋಗುವಷ್ಟು ತಲೆನೋವು ಇತ್ತು. ಮಾತನಾಡಲೂ ಆಗುತ್ತಿರಲಿಲ್ಲ. ಕೆನ್ನೆಯ ಮೇಲೆ ಕಣ್ಣೀರಹನಿಗಳು ಉರುಳುತ್ತಿದ್ದವು. ಕಂಬನಿಹನಿಗಳಿಂದ ಬಿಳಿಬಣ್ಣದ ಮೇಲುಹೊದಿಕೆ ಕಲೆಯಾಗಿತ್ತು. ಅವಳ ಸಾವಿನ ವಿವರಗಳು ವಯಸ್ಕನಾದ ಮೇಲೆಯೂ ನನ್ನನ್ನು ಭಯಭೀತನಾಗಿಸುತ್ತಿದ್ದವು, ಎಡೆಬಿಡದೆ ಕಾಡುತ್ತಿದ್ದವು. ಒಮ್ಮೆ ವಿಶ್ವವಿದ್ಯಾಲಯದಲ್ಲಿ ಓದುತ್ತಿದ್ದಾಗ, ನನಗೆ ಟೈಫಾಯ್ಡ್ ಕಾಯಿಲೆ ಬಂದು ಮೆಡಿಕಲ್ ಕಾಲೇಜು ಆಸ್ಪತ್ರೆಯಲ್ಲಿ ಮಲಗಿರುವಾಗಲೂ ಅವಳ ನೆನಪುಗಳು ನನ್ನನ್ನು ಸಾವಿನ ಭಯದಲ್ಲಿ ಮುಳುಗಿಸಿದ್ದವು.

ಅಕ್ಕನ ಸಾವಿನ ದಿನವು ನನ್ನ ಬಾಲ್ಯದ ಕರಾಳ ದಿನಗಳಲ್ಲಿ ಒಂದು. ಆ ಅನುಭವದಿಂದ ನಾನು ತಲ್ಲಣಿಸಿ ಹೋದೆ. ನಿರಂತರವಾಗಿ ಕಾಡುವ ಸಾವಿನ ಭಯವು ಅಂದಿನಿಂದ ನನ್ನ ಸಂಗಾತಿಯಾಯಿತು. ಅವಳ ಸಾವಿಗಿಂತ ಮೊದಲು ನಾನು ಒಂದು ಸಾವನ್ನೂ ನೋಡಿರಲಿಲ್ಲ, ಅದರ ಬಗ್ಗೆ ಯೋಚನೆಯೂ ಬಂದಿರಲಿಲ್ಲ. ಅರ್ಥ ಮಾಡಿಕೊಂಡಿರಲೂ ಇಲ್ಲ. ಅಲ್ಲಿತನಕ, ಕೇವಲ ವಯಸ್ಸಾದವರು ಮಾತ್ರ ಸಾಯುವರೆಂದು ನಾನು ತಿಳಿದಿದ್ದೆ. ಅದನ್ನು ಆಳವಾಗಿ ನಂಬಿದ್ದೆ. ಆದರೆ ಅವಳ ಅಕಾಲಮರಣವು ನನ್ನ ನಂಬಿಕೆಗಳನ್ನು ಬುಡಮೇಲು ಮಾಡಿತು. ನಾನು ಯಾವಾಗಲೂ ಅದರಲ್ಲಿಯೇ ಮುಳುಗಿರುತ್ತಿದ್ದೆ. ಬರಬರುತ್ತಾ ಈ ಪರಿಸ್ಥಿತಿಯು ಅತಿರೇಕಕ್ಕೆ ಹೋಯಿತು. ಇಬ್ಬರು ಪುಟ್ಟ ಹುಡುಗರನ್ನು (ರಾಜೇನ್ ಮತ್ತು ಟುಟು) ನನ್ನ ಕಾವಲಿಗೆಂದು ನೇಮಿಸಿದರು. ಅವರಿಬ್ಬರೂ ನೆರಳಿನಂತೆ ಸದಾ ನನ್ನ ಜೊತೆಯಲ್ಲಿ ಇರುತ್ತಿದ್ದರು. ಯಾರಾದರೂ ಹಿಂದಿನಿಂದ ಬಂದು ನನ್ನ ಹೆಸರನ್ನು ಮೃದುವಾಗಿ ಕರೆದರೂ ನಾನು ಬೆಚ್ಚಿಬೀಳುತ್ತಿದ್ದೆ. ನನ್ನ ತಂದೆಯ ಅಕ್ಕ ಈ ಭಯವನ್ನು ಬಿಡಿಸಲೆಂದು, ತುಕ್ಕು ಹಿಡಿದ ಚೂರಿ ಮತ್ತು ಕಬ್ಬಿಣದ ಉಂಗುರವನ್ನು ನನ್ನ ಕುತ್ತಿಗೆಗೆ ನೇತು ಹಾಕಿದ್ದರು. ಅದರ ಜೊತೆಗೆ, ಹಾಸಿಗೆಯ ಪಕ್ಕದಲ್ಲಿ ಮೊಂಡು ಕುಡುಗೋಲನ್ನು ಇಟ್ಟುಕೊಳ್ಳುವಂತೆ ಸಲಹೆ ಕೊಟ್ಟಿದ್ದರು. ನನ್ನ ಕಾವಲು ಕಾಯುವ ಹುಡುಗರು ಎರಡು ಮೂರು ವರ್ಷ ನನ್ನೊಂದಿಗಿದ್ದರು. ಕ್ರಮೇಣ ಅವರು ನನ್ನ ಆತ್ಮೀಯರಾದರು. ರಾಜೇನ್ ಬಿದಿರಿನ ಕೊಳಲನ್ನು ಬಹಳ ಚೆನ್ನಾಗಿ ನುಡಿಸುತ್ತಿದ್ದ. ಅವನು ಒಳ್ಳೆಯ ಹಾಡುಗಾರನೂ ಹೌದು. ಟುಟುಗೆ ಚಂದದ ಹಾಸ್ಯಪ್ರಜ್ಞೆ ಇತ್ತು. ತನ್ನ ಸಹಜ ಜಾಣತನದಿಂದ ಎಲ್ಲರಿಗೂ ಮನರಂಜನೆ ನೀಡುತ್ತಿದ್ದ. ಎಳೆತನದ ದಿನಗಳಲ್ಲಿ ಆ ಕೊಳಲ ಗಾನ, ಆ ಹಾಡುಗಳು ಮತ್ತು ಆ ಮಾಂತ್ರಿಕ ಮಧುರನಾದ ನನ್ನನ್ನು ಮರುಳುಗೊಳಿಸುತ್ತಿದ್ದವು. ನನ್ನ ಭಯ, ಕಳವಳಗಳಿಂದ ಅವು ತಾತ್ಕಾಲಿಕ ಬಿಡುಗಡೆ ನೀಡುತ್ತಿದ್ದವು. ಅದೂ ಅಲ್ಲದೆ ಜೀವನದಲ್ಲಿ ಮೊದಲ ಬಾರಿಗೆ ನಾನು ಗ್ರಾಮೀಣ ಭಾಷೆಯನ್ನು ಕೇಳಿದೆ ಮತ್ತು ಬಳಸತೊಡಗಿದೆ. ಆ ಹುಡುಗರು ಕೆಲವು ಪದಗಳು ಮತ್ತ ವಾಕ್ಯಗಳನ್ನು ಬಳಸುತ್ತಿದ್ದರು, ಅವು ನನಗೆ ಅಪರಿಚಿತವಾಗಿದ್ದವು. ಸಭ್ಯವಾದ ನಾಗರಿಕ ಸಮಾಜದಲ್ಲಿ ಅವುಗಳನ್ನು ಬಳಸುವುದಿಲ್ಲವೆಂದು ಅವು 'ಗ್ರಾಮ್ಯ'ವೆಂದು ಹಲವು ವರ್ಷಗಳ ನಂತರ ನನಗೆ ಗೊತ್ತಾಯಿತು.

## 3

ನನ್ನಕ್ಕ ಗುಣಾಳ ಸಾವು ಅಮ್ಮನನ್ನು ತೀವ್ರ ನೋವಿಗೆ ದೂಡಿತು, ಅವಳು ಗದ್ಗದಿಸಿ ಅಳತೊಡಗಿದಳು. ಮಿಸಿಂಗ್ ಬುಡಕಟ್ಟಿನ ಪಾರಂಪರಿಕ ದುಃಖಭರಿತ ಲಾವಣಿಗಳನ್ನು (ಕಬಾನ್) ಅಮ್ಮ ಹಾಡಿದಳು. ನಾನೂ ಅವಳೊಂದಿಗೆ ಜೋರಾಗಿ ಅತ್ತೆ. ಈ ಅಳುಹಾಡುಗಳ ಧಾಟಿ ಧೋರಣೆಗಳು ಬದಲಾಗುತ್ತಿದ್ದವು. ಅವು ದುಃಖ ಮತ್ತು ಕೋಪದ ಒಂದು ಬಗೆಯ ಮಿಶ್ರಣದಂತಿದ್ದವು. ಲಾವಣಿಗಳ ಲಯಧಾಟಿಯು ನನ್ನನ್ನು ಹತಾಶೆಗೆ ದೂಡಿತು. ಇದರಿಂದ, ನನ್ನ ಸುತ್ತ ಇದ್ದ ಹತ್ತು ಹಲವು ವಸ್ತುಗಳನ್ನು ಕುಟ್ಟಿ ಪುಡಿಮಾಡಿದೆ; ಎಷ್ಟೊಂದು ವಸ್ತುಗಳನ್ನು ಆ ಕಡೆ ಈ ಕಡೆ ಎಸೆದು ಮುರಿದೆ. ಒಳಗಿನ ತಳಮಳ ತಾಳಲಾರದೆ ಕಂಡ ಕಂಡ ವಸ್ತುಗಳಿಗೆ ತಲೆ